# 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು.

ಉಪಸ್ಥಿತರು :- **ಶ್ರೀ ಕೋನಪ್ಪ ಎನ್.ವಿ.,** ಬಿ.ಎ.ಎಲ್, ಎಲ್.ಎಲ್.ಬಿ.,
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

**ದಿನಾಂಕ 06 ನೇ ಫೆಬ್ರವರಿ 2024**

**ಅಸಲು ದಾವಾ ಸಂಖ್ಯೆ: 266/2021**

**ವಾದಿ :-**
**ಶ್ರೀಮತಿ. ಎಸ್.ಎಲ್.ಶಾಂತ,**
**ಕೋಂ ಎಸ್ ಎಂ ಕೃಷ್ಣ,**
**ಬಿನ್ ಲೇ.ಲಿಂಗಯ್ಯ,**
**ವಯಸ್ಸು ಸುಮಾರು 48 ವರ್ಷ,**
**ವಾಸಃ ಸಾದೊಳಲು ಗ್ರಾಮ, ಕಸಬಾ ಹೋಬಳಿ,**
**ಮದ್ದೂರು ತಾಲ್ಲೂಕು.**

**<u>ವಿರುದ್ಧ</u>**

**ಪ್ರತಿವಾದಿ :-**

**1. ಎಸ್.ಎಲ್.ರಮೇಶ್ ಬಾಬು,**
**ಬಿನ್ ಲೇ.ಲಿಂಗಯ್ಯ,**
**ವಯಸ್ಸು ಸುಮಾರು 61 ವರ್ಷ,**

**2. ಶ್ರೀಮತಿ.ಲಿಂಗಮ್ಮ ಉಃ ಚೌಡಮ್ಮ ಉಃ ನಿಂಗಮ್ಮ,**
**ಕೋ ಲೇ.ಲಿಂಗಯ್ಯ,**
**ವಯಸ್ಸು ಸುಮಾರು 74 ವರ್ಷ,**

**3. ಶ್ರೀಮತಿ. ಎಸ್.ಎಲ್.ಗೌರಮ್ಮ,**
**ಕೋಂ ವಿ.ಕೆ.ರಾಜು,**
**ಬಿನ್ ಲೇ.ಲಿಂಗಯ್ಯ,**
**ವಯಸ್ಸು ಸುಮಾರು 71 ವರ್ಷ,**
**ವಾಸಃ 1204/1, 1 ನೇ ಎ-ಮುಖ್ಯ ರಸ್ತೆ,**
**2 ನೇ ತಿರುವು, ವಿಜಯನಗರ, ಬೆಂಗಳೂರು.**

**4. ಶ್ರೀಮತಿ.ಎಸ್.ಎಲ್ ನಾಗಮ್ಮ ಕೋಂ ಶಂಕರೇಗೌಡ,**
**ಬಿನ್ ಲೇ.ಲಿಂಗಯ್ಯ,**

ವಯಸ್ಸು ಸುಮಾರು 69 ವರ್ಷ,
ವಾಸಃ 78/2, 1 ನೇ ಮುಖ್ಯ ರಸ್ತೆ,
ಶ್ರೀನಿವಾಸ್ ಲೇಔಟ್, ಶ್ರೀರಾಂಪುರ,
2 ನೇ ಹಂತ, ಮೈಸೂರು ಸಿಟಿ.

5. ಶ್ರೀಮತಿ. ಎಸ್. ಎಲ್. ಲಕ್ಷ್ಮೀ,
ಕೋಂ, ಕೆ.ಲಿಂಗರಾಜು, ಬಿನ್ ಲೇ.ಲಿಂಗಯ್ಯ,
ವಯಸ್ಸು ಸುಮಾರು 67 ವರ್ಷ,
ವಾಸಃ ಹೆಚ್-91, ಹನಿಯಂಬಾಡಿ ರಸ್ತೆ,
ಹೊಸಹಳ್ಳಿ, ಮಂಡ್ಯ ಸಿಟಿ.

6. ಶ್ರೀಮತಿ. ಎಸ್.ಎಲ್.ಸರಸು,
ಕೋಂ ಎಸ್ ಕೆ ರಾಮಲಿಂಗಯ್ಯ,
ಬಿನ್ ಲೇ.ಲಿಂಗಯ್ಯ,
ವಯಸ್ಸು ಸುಮಾರು 59 ವರ್ಷ,

7. ಶ್ರೀಮತಿ. ಎಸ್.ಎಲ್.ರೇಣುಕಾ,
ಕೋಂ ಬೋರೇಗೌಡ, ಬಿನ್ ಲೇ.ಲಿಂಗಯ್ಯ,
ವಯಸ್ಸು ಸುಮಾರು 50 ವರ್ಷ,
ವಾಸಃ ಗುತ್ತಲು, ಮಂಡ್ಯ ಸಿಟಿ.

8. ಎಸ್.ಎಲ್.ಸಾಗರ್ ಬಿನ್ ಎಸ್.ಎಲ್ ರಮೇಶಬಾಬು,
ವಯಸ್ಸು ಸುಮಾರು 31 ವರ್ಷ,

9. ಶ್ರೀಮತಿ.ಬಿ.ಎಂ ಸವಿತಾ ಕೋಂ ಎಸ್ ಎನ್ ಶಿವಣ್ಣ,
(ಎಸ್.ಎನ್.ಎಸ್ ಪ್ರಾವಿಜನ್ ಸ್ಟೋರ್ ಮಾಲೀಕರು)
ವಾಸಃ ಜಲಜ ನಿಲಯ, ನೀಲಾವತಿ ಬಡಾವಣೆ,
ಗೊರವನಹಳ್ಳಿ ರಸ್ತೆ, ವಾಟರ್ ಟ್ಯಾಂಕ್ ರಸ್ತೆ,
(ಗಣಪತಿ ದೇವಾಲಯದ ಹತ್ತಿರ)
ಮದ್ದೂರು ಟೌನ್.

ಪ್ರತಿವಾದಿ 1, 2, 6 ಮತ್ತು 8 ರವರ ವಾಸಃ
ಸಾದೊಳಲು ಗ್ರಾಮ, ಕಸಬಾ ಹೋಬಳಿ,
ಮದ್ದೂರು ತಾಲ್ಲೂಕು.

## ಮಧ್ಯಕಾಲಿನ ಅರ್ಜಿ ಸಂಖ್ಯೆ-1

ಅರ್ಜಿದಾರರು :- ಎಸ್.ಎಲ್.ಶಾಂತ,

***(ಪ್ರತಿನಿಧಿಸುವವರು ಶ್ರೀ.ಬಿ.ಸಿ.ಎಸ್., ವಕೀಲರು)***

**<u>ವಿರುದ್ಧ</u>**

**ಎದುರುದಾರರು :- ಎಸ್.ಎಲ್.ರಮೇಶ್ ಬಾಬು ಮತ್ತು ಇತರರು.**

***(1 ಮತ್ತು 8 ನೇ ಪ್ರತಿವಾದಿಯರ ಪರ ಪ್ರತಿನಿಧಿಸುವವರು ಶ್ರೀ.ಹೆಚ್.ಎಂ., ವಕೀಲರು)***
***(2 ನೇ ಪ್ರತಿವಾದಿಯ ಪರ ಪ್ರತಿನಿಧಿಸುವವರು ಶ್ರೀ.ಪಿ.ಹೆಚ್.ಡಿ., ವಕೀಲರು)***
***(3, 4 ಮತ್ತು 6 ನೇ ಪ್ರತಿವಾದಿಯರ ಪರ ಪ್ರತಿನಿಧಿಸುವವರು ಶ್ರೀ.ಎ.ಎಸ್, ವಕೀಲರು)***
***(5 ನೇ ಪ್ರತಿವಾದಿಯ ಪರ ಪ್ರತಿನಿಧಿಸುವವರು ಶ್ರೀ.ಎ.ಡಿ.ಎನ್., ವಕೀಲರು)***
***(7 ನೇ ಪ್ರತಿವಾದಿಯ ಪರ ಪ್ರತಿನಿಧಿಸುವವರು ಶ್ರೀ.ಹೆಚ್.ಟಿ.ಎಸ್., ವಕೀಲರು)***
***(9 ನೇ ಪ್ರತಿವಾದಿಯ ಪರ ಪ್ರತಿನಿಧಿಸುವವರು ಶ್ರೀ.ಹೆಚ್.ಸಿ.ವಿ, ವಕೀಲರು)***

**<u>ವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರ ಮಧ್ಯಕಾಲಿನ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ</u>**

ವಾದಿಯು ದಿವಾಣಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಸಲ್ಲಿಸಿ, ಪ್ರತಿವಾದಿ 1, 8 ಮತ್ತು 9 ರವರು ದಾವಾ ಶೆಡ್ಯೂಲ್ ಸ್ವತ್ತುಗಳನ್ನು ಯಾರೊಬ್ಬರಿಗೂ ಮಾರಾಟ, ಪರಭಾರೆ, ಭೋಗ್ಯ ಹಾಗೂ ಸಾಲ ವಗೈರೆಗಳಂತಹ ಋಣ ಬಾಧ್ಯತೆಗಳನ್ನು ಮಾಡದಂತೆ ಈ ದಾವಾ ತೀರ್ಮಾನ ಆಗುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2.** ಅರ್ಜಿದಾರರು ತಮ್ಮ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ಅವರು ಈ ದಾವೆಯನ್ನು ದಾವಾ ಅನುಸೂಚಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಭಾಗಾಂಶ ಕೋರಿ ಸಲ್ಲಿಸಿರುತ್ತಾರೆ. ವಾದಿಯು ತಿಳಿಯಪಡಿಸುವುದೇನೆಂದರೆ ವಾದಿ ಮತ್ತು 1 ಹಾಗೂ

8 ನೇ ಪ್ರತಿವಾದಿಗಳ ನಡುವೆ ಕೌಟುಂಬಿಕವಾಗಿ ಹೊಂದಾಣಿಕೆ ಮನುಭಾವ ಇಲ್ಲದ ಕಾರಣ, ಒಟ್ಟು ಕುಟುಂಬದಲ್ಲಿ ಮುಂದುವರೆಯುವುದು ಸೂಕ್ತವಲ್ಲ ಎಂದು ಭಾವಿಸಿ ತಾನು ಪ್ರತಿವಾದಿ 1 ರಿಂದ 8 ರವರನ್ನು ತನ್ನ ನ್ಯಾಯ ಬದ್ಧ ಭಾಗಾಂಶದ ಹಿಸೆಗಾಗಿ ಅನೇಕ ಬಾರಿ ಕೇಳಿಕೊಂಡಿರುತ್ತೇನೆ. ಆದರೆ ಪ್ರತಿವಾದಿಯರು ಕಾಲಾಹರಣ ಮಾಡಿಕೊಂಡು ಇಲ್ಲ ಸಲ್ಲದ ಸಬೂಬು ಹೇಳಿಕೊಂಡು 1 ಮತ್ತು 8 ನೇ ಪ್ರತಿವಾದಿಯ ಚಿತಾವಣೆಯಂತೆ ವಾದಿಯ ಹಿತಾಸಕ್ತಿಯನ್ನು ಧಕ್ಕೆಗೊಳಿಸಿ ಬೆಲೆ ಬಾಳುವ ದಾವಾ ಸ್ವತ್ತುಗಳನ್ನು ತನ್ನ ಗಮನಕ್ಕೆ ಬಾರದಂತೆ ಕ್ರಯದ ವ್ಯವಹರಣೆಯನ್ನು ಮಾಡಲು ಪ್ರಯತ್ನಿಸುತ್ತಿದ್ದಾರೆ. ಹಾಗೂ ವಾದಿಯ ಗಮನಕ್ಕೆ ಬಾರದಂತೆ ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ತಮ್ಮ ಹೆಸರಿಗೆ ಕಂದಾಯ ದಾಖಲೆಗಳನ್ನು ಸೃಷ್ಠಿಸಿಕೊಂಡಿರುತ್ತಾರೆ. ಈ ಕುರಿತು ವಾದಿಯವರು ಗ್ರಾಮದಲ್ಲಿ ಪಂಚಾಯಿತಿಯನ್ನು ಸಹ ಸೇರಿಸಿ ಪ್ರತಿವಾದಿಗಳಿಂದ ಉಂಟಾಗಿರುವ ಹಕ್ಕು ಹಿತಾಸಕ್ತಿಯ ಧಕ್ಕೆಯಿಂದಾಗಿ ತನಗೆ ದಾವಾ ಆಸ್ತಿಗಳಲ್ಲಿ ಇರುವ ಭಾಗಾಂಶವನ್ನು ಕೊಡುವಂತೆ ಕೇಳಿಕೊಂಡಿರುತ್ತಾರೆ. ಪಂಚಾಯಿತಿಯವರು ಕೂಡ ವಾದಿಯ ನ್ಯಾಯಯುತ ಭಾಗವನ್ನು ಅವರಿಗೆ ನೀಡುವಂತೆ ಬುದ್ದಿವಾದವನ್ನು ಹೇಳಿರುತ್ತಾರೆ. ಆದರೆ ಪ್ರತಿವಾದಿ 1 ಮತ್ತು 8 ರವರು ಪಂಚಾಯಿತಿದಾರರ ಮಾತಿಗೂ ಯಾವುದೇ ಬೆಲೆ ನೀಡದೆ ವಾದಿಯ ಭಾಗವನ್ನು ನೀಡಲು ನೀರಾಕರಿಸಿರುತ್ತಾರೆ. ವಾದಿಯು ಮುಂದುವರೆದು ತಿಳಿಯಪಡಿಸುವುದೆನೆಂದರೆ ಪ್ರತಿವಾದಿ 1 ರವರು ವಾದಿಗೆ ಭಾಗಾಂಶವನ್ನು ನೀಡುವ ಬದಲಾಗಿ 8 ನೇ ಪ್ರತಿವಾದಿಯ ಚಿತಾವಣೆಯಂತೆ ತಮ್ಮ ಹೆಸರಿನಲ್ಲಿ ಕಂದಾಯ ದಾಖಲೆಗಳು ನಮೂದು ಆಗಿರುವ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ತರಾತುರಿಯಲ್ಲಿ ಮಾರಾಟ, ಋಣ ಬಾಧ್ಯತೆಗಳನ್ನು ಮಾಡಿ ಪರಭಾರೆಯಂತಹ ವರ್ಗಾವಣೆಗಳನ್ನು ವಾದಿಗೆ ತಿಳಿಯದಂತೆ ಮಾಡಿ ವಾದಿಯ ಹಕ್ಕು ಹಾಗೂ ಹಿತಾಸಕ್ತಿಯನ್ನು ಮೊಟಕುಗೊಳಿಸಿ ಧಕ್ಕೆಯನ್ನುಂಟು ಮಾಡಿರುತ್ತಾರೆ. ಪ್ರತಿವಾದಿಗಳ ನಡುವಳಿಕೆಯಿಂದಾಗಿ ವಾದಿ ಈ ದಾವೆಯನ್ನು ಭಗಾಂಶದ ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆ. ಪ್ರತಿವಾದಿ 1 ಮತ್ತು 8 ರವರು ತಮ್ಮ ಹೆಸರಿನಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಸಿದಂತೆ ಕಂದಾಯ ದಾಖಲೆಗಳು ಸೃಷ್ಠಿಸಿಕೊಂಡಿದ್ದು ಅದರ ಆಧಾರದ ಮೇಲೆ ದಾವಾ ಆಸ್ತಿಗಳನ್ನು ಮಾರಾಟ ಮಾಡಲು ಪ್ರಯತ್ನಿಸಿರುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಗೆ ಹಕ್ಕು ಮತ್ತು ಅಧಿಕಾರ ಇದ್ದು ಅದನ್ನು

ಮೊಟಕುಗೊಳಿಸಲು ಪ್ರತಿವಾದಿಯವರು ಪ್ರಯತ್ನಿಸುತ್ತಿದ್ದಾರೆ. ಒಂದು ವೇಳೆ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಮಾರಾಟ ಮಾಡಿದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ವಾದಿಯ ಪರವಾಗಿ ಮೇಲ್ನೋಟಕ್ಕೆ ಸಮ್ಮತವಾದ ವಾದವಿದ್ದು, ದಾವೆಯನ್ನು ರುಜುವಾತುಪಡಿಸುವ ಹೊಣೆಗಾರಿಕೆ ವಾದಿಯ ಮೇಲೆ ಇರುತ್ತದೆ. ಈ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗಳಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ. ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ವಾದಿಯು ಪ್ರಾರ್ಥಿಸಿಕೊಂಡಿರುತ್ತಾರೆ.

**3.** ಪ್ರತಿವಾದಿ 1 ರಿಂದ 9 ರವರು ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಹಾಜರಾಗಿರುತ್ತಾರೆ. ಆದರೆ ಪ್ರತಿವಾದಿ 1, 3, 4, 6 ಮತ್ತು 8 ರವರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. ಆದರೆ ಪ್ರತಿವಾದಿ 3, 4 ಮತ್ತು 6 ರವರು ಪ್ರತಿವಾದಿ 1 ಮತ್ತು 8 ರವರ ಪ್ರತಿವಾದ ಪತ್ರವನ್ನು ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿ 1, 3, 4, 6 ಮತ್ತು 8 ರವರು ಒಂದು ಮೆಮೊ ಸಲ್ಲಿಸಿ ತಮ್ಮ ಪ್ರತಿವಾದ ಪತ್ರವನ್ನು ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ತಕರಾರು ಎಂದು ಪರಿಗಣಿಸುವಂತೆ ಕೋರಿರುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿ 1 ಮತ್ತು 8 ರವರು ಮಾತ್ರ ವಾದಿಯವರ ದಾವೆಯನ್ನು ಸಂಪೂರ್ಣವಾಗಿ ವಿರೋದಿಸುತ್ತಾರೆ. ಪ್ರತಿವಾದಿ 1 ಮತ್ತು 8 ರವರು ತಿಳಿಯಪಡಿಸುವುದೇನೆಂದರೆ ಪ್ರತಿವಾದಿ 1 ಹಾಗೂ 3 ರಿಂದ 6 ರವರ ತಾಯಿ ಲಿಂಗಮ್ಮ ರವರು ಅನಾರೋಗ್ಯ ನಿಮಿತ್ಯ 1971 ರಲ್ಲಿ ಮೃತಪಟ್ಟಿರುತ್ತಾರೆ. ಹಾಗೂ ಅವರ ತಂದೆ ಲಿಂಗಯ್ಯ ರವರು ಸಹ ದಿನಾಂಕಃ 29/11/2002 ರಂದು ಮೃತಪಟ್ಟಿರುತ್ತಾರೆ. ಪ್ರತಿವಾದಿ 2 ರವರು ಮಂಡ್ಯ ತಾಲ್ಲೂಕು ಹೊಸಬೂದನೂರು ಗ್ರಾಮದ ಉಜ್ಜನಿಚನ್ನೇಗೌಡನ ಬಸವೇಗೌಡರ ಮಗಳು ಆಗಿರುತ್ತಾರೆ. ಪ್ರತಿವಾದಿ 2 ರವರು ಮೊದಲಿಗೆ ಹೊಸಬೂದನೂರು ಗ್ರಾಮದ ಲೇಟ್ ತಮ್ಮೇಗೌಡರ ಮಗ ಟಿ ಸಿದ್ದಪ್ಪ ರವರನ್ನು 1958 ರಲ್ಲಿ ವಿವಾಹ ಮಾಡಿಕೊಂಡಿರುತ್ತಾರೆ. ನಂತರ ಸದರಿ ಪ್ರತಿವಾದಿ 2 ರವರು ತನ್ನ ಗಂಡನಾದ ಟಿ ಸಿದ್ದಪ್ಪ ರವರನ್ನು ಬಿಟ್ಟು ತಂದೆಯ ಮನೆಯಲ್ಲೇ ವಾಸವಾಗಿರುತ್ತಾರೆ. ಆದರೆ ಸದರಿ ಸಿದ್ದಪ್ಪ ಮತ್ತು ಪ್ರತಿವಾದಿ 2 ರವರ ನಡುವೆ ಯಾವುದೇ ವಿವಾಹ ವಿಚ್ಛೇದನ ಆಗಿರುವುದಿಲ್ಲ. ಸದರಿ ಸಿದ್ದಪ್ಪ ರವರು 05/02/2015 ರಂದು ಮೃತಪಟ್ಟಿರುತ್ತಾರೆ. ಅಲ್ಲಿಯವರೆಗೆ 2 ನೇ ಪ್ರತಿವಾದಿ ಮತ್ತು ಟಿ ಸಿದ್ದಪ್ಪ ರವರ ನಡುವೆ

ವೈವಾಹಿಕ ಸಂಬಂಧ ಇತ್ತು. ಪ್ರತಿವಾದಿ 1 ಮತ್ತು 8 ರವರು ಮುಂದುವರೆದು ತಿಳಿಯಪಡಿಸುವುದೇನೆಂದರೆ ಪ್ರತಿವಾದಿ 1 ರವರ ತಾಯಿ ಲಿಂಗಮ್ಮ ಮೃತಪಟ್ಟ ನಂತರ 1 ನೇ ಪ್ರತಿವಾದಿಯ ತಂದೆ ಲಿಂಗಯ್ಯ ರವರು ತನ್ನ ಸೌಕರ್ಯ ನೋಡಿಕೊಳ್ಳಲು 2 ನೇ ಪ್ರತಿವಾದಿಯನ್ನು ಕರೆದುಕೊಂಡು ಬಂದು ಮನೆಯಲ್ಲಿ ಇಟ್ಟುಕೊಂಡಿದ್ದರು. ಆದರೆ 2 ನೇ ಪ್ರತಿವಾದಿಯನ್ನು ಲಿಂಗಯ್ಯ ರವರು ಮದುವೆಯಾಗಿರಲಿಲ್ಲ. ಆದ್ದರಿಂದ 2 ನೇ ಪ್ರತಿವಾದಿಯು ಸದರಿ ಲಿಂಗಯ್ಯ ರವರ ಕಾನೂನು ಬದ್ದ ಹೆಂಡತಿಯಾಗಿರುವುದಿಲ್ಲ. ಹಾಗಾಗಿ ಅವರಿಗೆ ಜನಿಸಿರುವ ವಾದಿ ಮತ್ತು ಪ್ರತಿವಾದಿ 7 ರವರು ಲಿಂಗಯ್ಯ ರವರ ಕಾನೂನು ಬದ್ದ ವಾರಸುದಾರರಲ್ಲ. ದಾವಾ ಆಸ್ತಿಗಳೆಲ್ಲವೂ ಲಿಂಗಯ್ಯ ರವರ ಪಿತ್ರಾರ್ಜಿತ ಸ್ವತ್ತುಗಳಾಗಿರುವುದರಿಂದ ಅವುಗಳಲ್ಲಿ ಭಾಗ ಕೇಳುವ ಹಕ್ಕು ವಾದಿಗೆ ಇರುವುದಿಲ್ಲ.

**4.** ಸದರಿ ಲಿಂಗಮ್ಮ ರವರು ರಾತ್ರೋರಾತ್ರಿ ಲಿಂಗಯ್ಯ ರವರ ಮನೆ ಸೇರಿಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ಲಿಂಗಯ್ಯ ರವರ 2 ನೇ ಪುತ್ರಿಯ ವಿವಾಹವಾಗಿತ್ತು ಉಳಿದ ಪ್ರತಿವಾದಿ 1 ಹಾಗೂ ಪ್ರತಿವಾದಿ 4 ರಿಂದ 6 ರವರು ಅಪ್ರಾಪ್ತ ವಯಸ್ಕರರಾಗಿದ್ದರು, ಆದ್ದರಿಂದ ಸದರಿ ಲಿಂಗಯ್ಯ ರವರನ್ನು ಕೇಳುವ ಪರಿಸ್ಥಿತಿಯಲ್ಲಿ ಅವರು ಇರಲಿಲ್ಲ. 1999 ರಲ್ಲಿ ಲಿಂಗಯ್ಯ ರವರು ಪಾರ್ಶವಾಯು, ಹೃದಯ ಬೆನೆ ಮತ್ತ ಗಂಟಲ ಕ್ಯಾನ್ಸರ್ ಖಾಯಿಲೆಗೆ ಒಳಗಾಗಿರುತ್ತಾರೆ ಆ ಸಂದರ್ಭದಲ್ಲಿ ಪ್ರತಿವಾದಿ 1 ರವರು ತನ್ನ ಸಂಪಾದನೆಯಿಂದ ಅವರಿಗೆ ಚಿಕಿತ್ಸೆಯನ್ನು ಕೊಡಿಸಿರುತ್ತಾರೆ. ಆ ಸಂದರ್ಭದಲ್ಲಿ ಸದರಿ ಲಿಂಗಯ್ಯ ರವರು 1 ನೇ ಪ್ರತಿವಾದಿ ಕೈ ಹಿಡಿದುಕೊಂಡು 2 ನೇ ಪ್ರತಿವಾದಿಯನ್ನು ಕಡೆಗಣಿಸದೆ ಮನೆಯಿಂದ ಹೊರಹಾಕದೆ ಮಾನವಿಯತೆ ದೃಷ್ಟಿಯಿಂದ ನೋಡಿಕೊಳ್ಳಬೇಕೆಂದು ಕೇಳಿಕೊಂಡ ಮೇರೆಗೆ 2 ನೇ ಪ್ರತಿವಾದಿಯು ತನ್ನ ತಂದೆಯ ಧರ್ಮ ಪತ್ನಿ ಅಲ್ಲದಿದ್ದರೂ ಸಹ ತಂದೆಯ ಮಾತನ್ನು ಈಡೆರಿಕೆಗಾಗಿ ಊರಿನಲ್ಲಿ ತನ್ನ ಪಿತ್ರಾರ್ಜಿತ ಮನೆಯಲ್ಲಿ ವಾಸಕ್ಕೆ ಬಿಟ್ಟು ತನ್ನ ಕುಟುಂಬದೊಡನೆ ಮಂಡ್ಯದ ಬಾಡಿಗೆ ಮನೆಯಲ್ಲಿ ಪ್ರತಿವಾದಿ 1 ರವರು 2018 ರ ಜುಲೈ ತಿಂಗಳವರೆಗೂ ವಾಸವಾಗಿರುತ್ತಾರೆ. ಸದರಿ ಲಿಂಗಯ್ಯ ರವರು 2 ನೇ ಪ್ರತಿವಾದಿಗೆ ತನ್ನ ಪಿತ್ರಾರ್ಜಿತ ವಾಸದ ಮನೆಯ ಮುಂದೆ ಒಂದು ನಿವೇಶನವನ್ನು ಹಾಗೂ 18 ಗುಂಟೆ ಜಮೀನನ್ನು ಸಹ ಆಕೆಯ ಜೀವನಕ್ಕೆ

ಆಧಾರವಾಗಲೆಂದು ಕೊಡಿಸಿರುತ್ತಾರೆ.

**5.** ಪ್ರತಿವಾದಿ 1 ಮತ್ತು 8 ರವರು ಮುಂದುವರೆದು ತಿಳಿಯುಸವುದೇನೆಂದರೆ ದಾವಾ ಸ್ವತ್ತು 9 ರಲ್ಲಿ ನಾಡ ಹೆಂಚಿನ ಮನೆ ಇದ್ದು, ಅದು ಸಂಪೂರ್ಣವಾಗಿ ಶೀಥಿಲವಾಗಿತ್ತು ಅದನ್ನು ಹೊಡೆದು ಹಾಕಿ ಹೊಸ ಮನೆ ನಿರ್ಮಾಣ ಮಾಡುವುದಕ್ಕೆ 1 ನೇ ಪ್ರತಿವಾದಿಯಿಂದ ಸಾದ್ಯವಾಗಿರಲಿಲ್ಲ. 8 ನೇ ಪ್ರತಿವಾದಿಯು ವಿದ್ಯಾವಂತನಾಗಿದ್ದು, ಇಂಜಿಯನಿರಿಂಗ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಪಕರಾಗಿದ್ದು ಮತ್ತು 8 ನೇ ಪ್ರತಿವಾದಿಯ ಹೆಂಡತಿ ಸರ್ಕಾರಿ ಅಭಿಯಂತರಾಗಿದ್ದು ಸಾಕಷ್ಟು ವರಮಾನ ಇದ್ದುದ್ದರಿಂದ ಹಾಗೂ ಸಾಲ ತೀರಿಸುವ ಚೈತನ್ಯ ಇದ್ದುದ್ದರಿಂದ ದಾವಾ ಸ್ವತ್ತು 9 ನ್ನು ಪ್ರತಿವಾದಿ 8 ರವರ ಹೆಸರಿಗೆ ವರ್ಗಾವಣೆ ಮಾಡಿಕೊಟ್ಟಿದ್ದು ನಂತರ 8 ನೇ ಪ್ರತಿವಾದಿ ಹಣಕಾಸು ಸಂಸ್ಥೆಗಳಿಂದ 35 ಲಕ್ಷ ರೂಪಾಯಿ ಸಾಲ ಮಾಡಿ ತನ್ನ ಸ್ವಂತ ಹಣ ಸೇರಿಸಿ 70 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಿ ಒಂದು ಆರ್ ಸಿ ಸಿ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ. ಈಗಲೂ ಕೂಡ ಪ್ರತಿ ತಿಂಗಳು ಸಾಲದ ಕಂತನ್ನು ಪಾವತಿಸುತ್ತಿದ್ದಾರೆ. ಈಗ ಪ್ರತಿವಾದಿ 1 ಮತ್ತು ಆತನ ಕುಟುಂಬಸ್ಥರು ಆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಪ್ರತಿವಾದಿ 1 ಮತ್ತು 8 ರವರು ಮುಂದುವರೆದು ತಿಳಿಯಪಡಿಸುವುದೇನೆಂದರೆ ಪ್ರತಿವಾದಿ 1 ರವರ ಮಗಳ ಮದುವೆಯ ಮಾಡುವ ಸಂದರ್ಭ ಬಂದಾಗ ಹಾಗೂ ಅವರ ಬಳಿ ಮದುವೆ ಖರ್ಚಿಗೆ ಹಣ ಇಲ್ಲದೆ ಇದ್ದರಿಂದ 1 ನೇ ಪ್ರತಿವಾದಿ ದಾವಾ ಸ್ವತ್ತು 6 ರಿಂದ 8 ಮಾರಾಟ ಮಾಡಿರುತ್ತಾರೆ. ಸದರಿ ಹಣದಿಂದ ತನ್ನ ಮಗಳ ಮದುವೆಯನ್ನು ಮಾಡಿರುತ್ತಾರೆ. ಸದರಿ ಕ್ರಯ ಪತ್ರಕ್ಕೆ ವಾದಿ, 2 ಮತ್ತು 7 ನೇ ಪ್ರತಿವಾದಿಗಳು ಸಹ ಸಹಿ ಮಾಡಿರುತ್ತಾರೆ. ಪ್ರತಿವಾದಿ 1 ರವರು ತಮ್ಮ ಕುಟುಂಬ ಸಮೇತ ದಾವಾ ಆಸ್ತಿ 9 ರಲ್ಲಿ ವಾಸ ಮಾಡಲು ಪ್ರಾರಂಭ ಮಾಡಿದ ನಂತರ 2 ನೇ ಪ್ರತಿವಾದಿ ತನ್ನ ಮಕ್ಕಳ ಚಿತಾವಣೆಯ ಮೇರೆಗೆ 1 ನೇ ಪ್ರತಿವಾದಿಯ ಮನೆಯಿಂದ ಹೊರಟು ವಾದಿಯ ಮನೆಯಲ್ಲಿ ವಾಸವಾಗಿರುತ್ತಾರೆ. ನಂತರ 2 ನೇ ಪ್ರತಿವಾದಿ, ವಾದಿ ಮತ್ತು 7 ನೇ ಪ್ರತಿವಾದಿ ಹಾಗೂ ಅವರ ಅಳಿಯಂದಿರ ಚಿತಾವಣೆಯ ಮೇರೆಗೆ ಮಂಡ್ಯ ಉಪವಿಭಾಧಿಕಾರಿಗಳ ನ್ಯಾಯಾಲಯದಲ್ಲಿ ಹಿರಿಯ ನಾಗರಿಕರ ಸಂರಕ್ಷಣಾ ಕಾಯ್ದೆಯನ್ನು ದುರುಪಯೋಗಪಡಿಸಿಕೊಂಡು 1 ನೇ ಪ್ರತಿವಾದಿಯ ವಿರುದ್ದ ದೂರು ನೀಡಿರುತ್ತಾರೆ.

ಪ್ರತಿವಾದಿ 2 ರವರಿಗೆ ಪ್ರತಿವಾದಿ 1 ರವರ ಮೇಲೆ ಜೀವನಾಂಶವನ್ನು ಕೇಳುವ ಯಾವುದೇ ಅಧಿಕಾರ ಇರುವುದಿಲ್ಲ. ಆದರೂ ಕೂಡ ಪ್ರತಿವಾದಿ 1 ರವರು ಸಮಾಜದಲ್ಲಿ ಗೌರವವುಳ್ಳ ವ್ಯಕ್ತಿಯಾಗಿದ್ದು, ಹಾಗೂ ಜವಾಬ್ದಾರಿವುಳ್ಳ ವಕೀಲರಾಗಿದ್ದು, ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ತನ್ನ ತಂದೆಗೆ ನೀಡಿದ್ದ ವಾಗ್ದಾನವನ್ನು ಈಡೇರಿಸಲು 2 ನೇ ಪ್ರತಿವಾದಿಯನ್ನು ನೋಡಿಕೊಳ್ಳುವ ಅಥವಾ ಅವರಿಗೆ ಮಾಶಾಸನ ನೀಡುವ ಹೇಳಿಕೆಯನ್ನು ಸಹ ಕೊಟ್ಟಿರುತ್ತಾರೆ. ಪ್ರತಿವಾದಿ 3,4 ಮತ್ತು 6 ರವರು 1 ನೇ ಪ್ರತಿವಾದಿ ತನ್ನ ಕುಟುಂಬಕ್ಕೆ ಮಾಡಿರುವ ವಿಶಿಷ್ಟ ಸೌಕರ್ಯಗಳನ್ನು ಹಾಗೂ ತ್ಯಾಗವನ್ನು ಪರಿಗಣಿಸಿ ದಿನಾಂಕಃ 28/09/2021 ರಂದು 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ ತಮಗೆ ಇರುವ ಭಾಗಾಂಶದ ಹಕ್ಕನ್ನು ಬಿಟ್ಟುಕೊಟ್ಟು ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ವಾದಿ, ಪ್ರತಿವಾದಿ 2 ಮತ್ತು ಪ್ರತಿವಾದಿ 7 ರವರಿಗೆ ದಾವಾ ಸ್ವತ್ತುಗಳಲ್ಲಿ ಭಾಗವನ್ನು ಕೇಳಲು ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಕಸಿದರೆ ಪ್ರತಿವಾದಿ 1 ಮತ್ತು 8 ರವರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಒಂದು ವೇಳೆ ಈ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗೆ ಯಾವುದೇ ನಷ್ಟ ಉಂಟಾಗುವುದಿಲ್ಲ. ಆದ್ದರಿಂದ ವಾದಿಯು ಸಲ್ಲಿಸಿರುವ ಅರ್ಜಿಯನ್ನು ಖರ್ಚು ಸಮೇತ ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**6.** ಉಭಯ ಪಕ್ಷಗಾರರ ವಾದವನ್ನು ಆಲಿಸಿದ ನಂತರ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

***1.*** **ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ವಾದಿಯು ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ತೋರ್ಪಡಿಸಿದ್ದಾರೆಯೇ*****?***

***2.*** **ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ*****?***

***3.*** **ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವುದರಿಂದ ವಾದಿಗೆ ತುಂಬಲಾರದ ನಷ್ಟ ಮತ್ತು ಸರಿ ಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ** ***?***

***4.* ಯಾವ ಆದೇಶ ?**

**7.** ಇಬ್ಬರು ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿರುವ ದಾಖಲಾತಿಗಳನ್ನು ಕೂಲಕುಂಷವಾಗಿ ಪರಿಶೀಲಿಸಲಾಯಿತು. ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

**ಅಂಶ *1* : ಸಕಾರಾತ್ಮಕವಾಗಿ,**
**ಅಂಶ *2* : ಸಕಾರಾತ್ಮಕವಾಗಿ,**
**ಅಂಶ *3* : ಸಕಾರಾತ್ಮಕವಾಗಿ,**
**ಅಂಶ *4* : ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ,**

## ಕಾರಣಗಳು

**8. ಅಂಶ 1 ರಿಂದ 3:-** ನ್ಯಾಯಾಲಯದ ಮುಂದಿರುವ ಕಡತವನ್ನು ಪರಿಶೀಲಿಸಿದಾಗ ವಾದಿಯು ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಭಾಗಾಂಶವನ್ನು ಕೋರಿ ದಾಖಲು ಮಾಡಿರುತ್ತಾರೆ. ವಾದಿಯ ವಾದವೇನೆಂದರೆ ವಾದಿ ಮತ್ತು ಪ್ರತಿವಾದಿಗಳು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತಾರೆ. ದಾವಾ ಆಸ್ತಿಗಳೆಲ್ಲ ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಲಿಂಗಯ್ಯ ಎಂಬುವವರು ವಾದಿ, ಪ್ರತಿವಾದಿ 1 ಮತ್ತು 3 ರಿಂದ 7 ರವರ ತಂದೆಯಾಗಿದ್ದು, ಪ್ರತಿವಾದಿ 2 ರವರ ಗಂಡನಾಗಿರುತ್ತಾರೆ. ಅವರು ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಮೂಲ ಪುರುಷರಾಗಿರುತ್ತಾರೆ. ಸದರಿ ಲಿಂಗಯ್ಯ ರವರಿಗೆ ಇಬ್ಬರು ಹೆಡಂತಿಯರಿದ್ದು, ಮೊದಲನೆ ಹೆಂಡತಿ ಲಿಂಗಮ್ಮ ರವರಿಗೆ ಪ್ರತಿವಾದಿ 1, 3 ಮತ್ತು 4 ರವರು ಜನಿಸಿರುತ್ತಾರೆ. ಮೊದಲನೆ ಹೆಂಡತಿ ಲಿಂಗಮ್ಮ ರವರು ಮರಣ ಹೊಂದಿದ ನಂತರ ಸದರಿ ಲಿಂಗಯ್ಯ ರವರು ಪ್ರತಿವಾದಿ 2 ರವರನ್ನು ವಿವಾಹವಾಗಿರುತ್ತಾರೆ. ಪ್ರತಿವಾದಿ 7 ಮತ್ತು ವಾದಿಯವರು ಸದರಿ ಲಿಂಗಯ್ಯ ರವರ ಎರಡನೆಯ ಹೆಂಡತಿಯ ಮಕ್ಕಳಾಗಿರುತ್ತಾರೆ. ಪ್ರತಿವಾದಿ 8 ರವರು 1ನೇ ಪ್ರತಿವಾದಿಯ ಮಗನಾಗಿರುತ್ತಾನೆ. ವಾದಿಯು ಮುಂದುವರೆದು ತಿಳಿಯಪಡಿಸುವುದೇನೆಂದರೆ ಲಿಂಗಯ್ಯ ರವರ ಜೀವಿತಾವಧಿಯಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಅವರ ಹೆಸರಿನಲ್ಲಿತ್ತು. ಸದರಿ ಲಿಂಗಯ್ಯ ರವರು ಒಟ್ಟು ಕುಟುಂಬದ ಕರ್ತ ರಾಗಿ ಎಲ್ಲಾ ವ್ಯವಹಾರಗಳು ನೋಡಿಕೊಳ್ಳುತ್ತಿದ್ದರು. ಸದರಿ ಲಿಂಗಯ್ಯ

ರವರು ಮೃತಪಟ್ಟ ನಂತರ ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿ ನಡುವೆ ವಿಭಾಗ ಆಗಿರುವುದಿಲ್ಲ. ಇಂದಿಗೂ ಕೂಡ ವಾದಿ ಮತ್ತು ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಜಂಟಿಯಾಗಿ ಅನುಭವಿಸುತ್ತಿದ್ದಾರೆ.

**9.** ಪ್ರತಿವಾದಿ 1 ಮತ್ತು 8 ರವರು ದಾವಾ ಆಸ್ತಿಗಳನ್ನು ವಾದಿಗೆ ನೀಡದೆ ಮೋಸ ಮಾಡುವ ಉದ್ದೇಶದಿಂದ ದಾವಾ ಆಸ್ತಿಗಳಿಂದ ಬರುತ್ತಿರುವ ಆದಾಯ ಮತ್ತು ವೆಚ್ಚದ ಬಗ್ಗೆ ಯಾವುದೇ ಮಾಹಿತಿಯನ್ನು ವಾದಿಯವರಿಗೆ ನೀಡುತ್ತಿಲ್ಲ. ಒಟ್ಟು ಕುಟುಂಬಕ್ಕೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿ ವಿನಿಯೋಗಿಸುವ ಯಾವುದೇ ಅವಶ್ಯಕತೆ ಇಲ್ಲದೆ ಇದ್ದರು ಕೂಡ ಪ್ರತಿವಾದಿ 1 ಮತ್ತು 8 ರವರು ದಾವಾ ಆಸ್ತಿಗಳನ್ನು ಮಾರಾಟ ಮಾಡುಲು ಪ್ರಯತ್ನಿಸುತ್ತಿದ್ದಾರೆ. ಸದರಿ ವಿಚಾರ ವಾದಿಯವರಿಗೆ ತಿಳಿದು ದಾವಾ ಆಸ್ತಿಗಳಲ್ಲಿ ತನೆ ಇರುವ ಭಾಗವನ್ನು ನೀಡುವಂತೆ ಪ್ರತಿವಾದಿ 1 ಮತ್ತು 8 ರವರನ್ನು ಕೋರಿಕೊಂಡಿರುತ್ತಾರೆ. ಅವರು ಮೊದಲಿಗೆ ಭಾಗವನ್ನು ನೀಡಲು ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿ 1 ಮತ್ತು 8 ರವರು ವಾದಿ ಮತ್ತು ಪ್ರತಿವಾದಿ 3 ರಿಂದ 7 ರವರ ಮುಗ್ದತೆಯ ಲಾಭವನ್ನು ಪಡೆದು ಅವರಿಗೆ ವಂಚನೆ ಮತ್ತು ಮೋಸ ಮಾಡುವ ಉದ್ದೇಶದಿಂದ ದಿನಾಂಕಃ 20/06/2020 ರಂದು ಅವರ ಮನೆಗೆ ಬಂದು ಕೆಲವು ದಾಖಲೆಗಳಿಗೆ ವಾದಿ ಮತ್ತು ಪ್ರತಿವಾದಿ 3 ರಿಂದ 7 ರವರುಗಳ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಸದರಿ ಸಹಿಗಳು ವಿಭಾಗದ ದಾಖಲೆಗಳನ್ನು ತಯಾರು ಮಾಡಲು ಅವಶ್ಯಕತೆ ಇದೆ ಎಂದು ನಂಬಿಸಿ ದಿನಾಂಕಃ 20/06/2020 ರಂದು ಪ್ರತಿವಾದಿ 1 ರವರು ಮತ್ತು ಅವರ ಮಗನಾದ 8 ನೇ ಪ್ರತಿವಾದಿಯವರು 9 ನೇ ಪ್ರತಿವಾದಿಯವರ ಹೆಸರಿಗೆ ಕಾನೂನು ಬಾಹಿರವಾಗಿ ದಾವಾ ಆಸ್ತಿ ಸಂಖ್ಯೆ 6, 7 ಮತ್ತು 8 ಕ್ಕೆ ಸಂಬಂಧಿಸಿದಂತೆ ಕ್ರಯಪತ್ರನ್ನು ಸೃಷ್ಟಿಸಿರುತ್ತಾರೆ. ಅದು ಅಲ್ಲದೆ ಪ್ರತಿವಾದಿ 8 ರವರ ಹೆಸರಿಗೆ ಅಕ್ರಮವಾಗಿ ದಾವಾ ಆಸ್ತಿ 9 ರವರ ಖಾತೆಯನ್ನು ವರ್ಗಾವಣೆ ಮಾಡಿರುತ್ತಾರೆ. ಸದರಿ ವಿಚಾರಗಳನ್ನು ವಾದಿಯವರು ಕೇಳಿದಾಗ ಪ್ರತಿವಾದಿ 1 ಮತ್ತು 8 ರವರು ವಾದಿಯನ್ನು ಹಿಯಾಳಿಸಿ ಯಾವುದೇ ಭಾಗ ನೀಡುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ದಾವಾ ಆಸ್ತಿಗಳಲ್ಲಿ ವಾದಿಗೆ 1/8 ನೇ ಭಾಗ ಭಾಗಾಂಶದ ಹಕ್ಕು ಇರುವುದು ಗೊತ್ತಿದ್ದರೂ ಕೂಡ ವಾದಿಗೆ ಭಾಗಾಂಶವನ್ನು ನೀಡದೆ ಕಿರುಕುಳವನ್ನು ನೀಡುತ್ತಿದ್ದಾರೆ.

ಪ್ರತಿವಾದಿ 1 ಮತ್ತು 8 ರವರು ಒಬ್ಬರಿಗೊಬ್ಬರು ಶಾಮೀಲಾಗಿ ದಾವಾ ಆಸ್ತಿಗಳ ಮೇಲೆ ಏಕ ಸ್ವಮ್ಯ ವ್ಯವಹರಣೆಯನ್ನು ಮಾಡಿ ವಾದಿಯ ನೀಹಿತ ಹಕ್ಕಿಗೆ ಕೆಡಕನ್ನು ಉಂಟು ಮಾಡಲು ಪ್ರಯತ್ನಿಸಿರುತ್ತಾರೆ.

**10.** ಪ್ರತಿವಾದಿ 1 ಮತ್ತು 8 ರವರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿ ಪ್ರತಿವಾದಿ 2 ರವರು ಮೃತ ಲಿಂಗಯ್ಯ ರವರ ಕಾನೂನು ಬದ್ದ ಹೆಂಡತಿಯಲ್ಲ, ಅವರಿಗೆ ಜನಿಸಿರುವ ವಾದಿ ಮತ್ತು ಪ್ರತಿವಾದಿ 7 ರವರು ಲಿಂಗಯ್ಯ ರವರ ಕಾನೂನು ಬದ್ದ ವಾರಸುದಾರರಲ್ಲ. ಆದ್ದರಿಂದ ಅವರಿಗೆ ದಾವಾ ಆಸ್ತಿಗಳಲ್ಲಿ ಭಾಗ ಕೇಳುವ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ. ಅವರು ಮುಂದುವರೆದು ತಿಳಿಯಪಡಿಸುವುದೇನೆಂದರೆ ಪ್ರತಿವಾದಿ 2 ರವರಿಗೆ 1958 ರಲ್ಲಿ ಹೊಸಬೂದನೂರು ಗ್ರಾಮದ ಟಿ ಸಿದ್ದಪ್ಪ ರವ ರಿಗೆ ವಿವಾಹವಾಗಿರುತ್ತದೆ. ಆದರೆ ಸದರಿ ಪ್ರತಿವಾದಿ 2 ರವರು ತಮ್ಮ ಗಂಡನ ಮನೆಗೆ ಹೋಗದೆ ತನ್ನ ತಂದೆಯ ಮನೆಯಲ್ಲಿ ವಾಸವಾಗಿರುತ್ತಾರೆ. ಆದರೂ ಕೂಡ ಪ್ರತಿವಾದಿ 2 ರವರು ತನ್ನ ಮೊದಲನೆಯ ಗಂಡನಿಗೆ ಯಾವುದೇ ವಿಚ್ಚೇದನವನ್ನು ನೀಡಿರುವುದಿಲ್ಲ.

**11.** 1 ನೇ ಪ್ರತಿವಾದಿಯ ತಂದೆ ಲಿಂಗಯ್ಯ ರವರು ಮೃತಪಟ್ಟ ನಂತರ ತನ್ನ ಮೂಲಕ ಸೌಕರ್ಯಗಳನ್ನು ನೋಡಿಕೊಳ್ಳಲು 2 ನೇ ಪ್ರತಿವಾದಿಯನ್ನು ಕರೆದುಕೊಂಡು ಮನೆಯಲ್ಲಿ ಇಟ್ಟುಕೊಂಡ್ಡಿರು. ಆದರೆ ಸದರಿ ಲಿಂಗಯ್ಯ ರವರು 2 ನೇ ಪ್ರತಿವಾದಿಯನ್ನು ಎಂದು ಕೂಡ ಮದುವೆಯಾಗಿರಲಿಲ್ಲ. ಸದರಿ ಲಿಂಗಯ್ಯ ರವರು 2 ನೇ ಪ್ರತಿವಾದಿಯನ್ನು ತನ್ನ ಮನೆಗೆ ಕರೆದುಕೊಂಡ ಬಂದ ಸಂದರ್ಭದಲ್ಲಿ ಪ್ರತಿವಾದಿ 1 ಹಾಗೂ ಪ್ರತಿವಾದಿ 4 ರಿಂದ 6 ರವರು ಅಪ್ರಾಪ್ತ ವಯಸ್ಕರಾಗಿದ್ದು, ಸದರಿ ಲಿಂಗಯ್ಯ ರವರನ್ನು ಕೇಳುವ ಪರಿಸ್ಥಿತಿಯಲ್ಲಿ ಇರಲಿಲ್ಲ. ಪ್ರತಿವಾದಿ 1 ಮತ್ತು 8 ರವರು ಮುಂದುವರೆದು ತಿಳಿಯಪಡಿಸುವುದೇನೆಂದರೆ ದಾವಾ ಐಟಂ 9 ರಲ್ಲಿ ನಾಡ ಹೆಂಚಿನ ಮನೆಯು ಪೂರ್ಣವಾಗಿ ಶಿಥಿಲವಾಗಿತ್ತು ಸದರಿ ಮನೆಯನ್ನು ಹೊಡೆದು ಹಾಕಿ ಹೊಸ ಮನೆ ನಿರ್ಮಾಣ ಮಾಡುವುದಕ್ಕೆ 1 ನೇ ಪ್ರತಿವಾದಿಯಿಂದ ಸಾದ್ಯವಾಗಿರಲಿಲ್ಲ. 8 ನೇ ಪ್ರತಿವಾದಿಯು ವಿದ್ಯಾವಂತನಾಗಿದ್ದು, ಇಂಜಿಯನಿರಿಂಗ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ ರಾಗಿದ್ದು, ಮತ್ತು 8 ನೇ ಪ್ರತಿವಾದಿ ಹೆಂಡತಿ ಸರ್ಕಾರಿ ಅಭಿಯಂತರ ರಾಗಿದ್ದು, ಸಾಕಷ್ಟು ವರಮಾನ

ಇದ್ದುದ್ದರಿಂದ ಹಾಗೂ ಸಾಲ ತೀರಿಸುವ ಚೈತನ್ಯ ಇದ್ದುದ್ದರಿಂದ ದಾವಾ ಸ್ವತ್ತು 9 ನ್ನು ಅವರ ಹೆಸರಿಗೆ ವರ್ಗಾವಣೆ ಮಾಡಿ ಅವರು 35 ಲಕ್ಷ ರೂಪಾಯಿ ಸಾಲವನ್ನು ಪಡೆದು ಮತ್ತು ತನ್ನ ಬಳಿ ಇರುವ ಹಣವನ್ನು ವಿನಿಯೋಗಿಸಿ ಮನೆಯನ್ನು ಕಟ್ಟಿರುತ್ತಾರೆ. ಈಗ ಸದರಿ ಮನೆಯಲ್ಲಿ ಪ್ರತಿವಾದಿ 1 ಮತ್ತು ಅವರ ಕುಟುಂಬಸ್ಥರು ಸ್ವಾಧೀನದಲ್ಲಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಪ್ರತಿವಾದಿ 3, 4 ಮತ್ತು 6 ರವರು ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ತಾವು ಪ್ರತಿವಾದಿ 1 ರವರ ಹೆಸರಿಗೆ ದಿನಾಂಕಃ 28/09/2021 ರಂದು ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿರುವುದಾಗಿ ತಿಳಿಸಿರುತ್ತಾರೆ.

**12.** ಈ ದಾವೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಪ್ರತಿವಾದಿ 1 ರವರ ತಂದೆಯವರು ಪ್ರತಿವಾದಿ 2 ರವರನ್ನು ಕಾನೂನು ಬದ್ಧವಾಗಿ ಹಿಂದೂ ಸಂಪ್ರದಾಯದಂತೆ ವಿವಾಹವಾಗಿರುವುದಿಲ್ಲ, ಅವರಿಗೆ ಜನಿಸಿರುವ ವಾದಿ ಮತ್ತು ಪ್ರತಿವಾದಿ 7 ರವರು ಸದರಿ ಲಿಂಗಯ್ಯ ರವರ ಕಾನೂನು ಬದ್ಧ ವಾರಸುದಾರರಲ್ಲ. ಆದ್ದರಿಂದ ಅವರು ದಾವಾ ಆಸ್ತಿಗಳಲ್ಲಿ ಭಾಗಾಂಶವನ್ನು ಪಡೆಯಲು ಅರ್ಹರಲ್ಲ ಎಂದು ತಿಳಿಸಿರುತ್ತಾರೆ. ವಾದಿ ಮತ್ತು ಪ್ರತಿವಾದಿ 7 ರವರು ಲಿಂಗಯ್ಯ ರವರ ಕಾನೂನು ಬದ್ಧ ವಾರಸುದಾರರೇ ಅಥವಾ ಅಲ್ಲವೇ ಎಂಬುದನ್ನು ಈ ಹಂತದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ. ಮುಂದುವರೆದು ಪ್ರತಿವಾದಿ 1 ಮತ್ತು 8 ರವರು ತಾವು ದಾವಾ ಆಸ್ತಿ 6 ರಿಂದ 8 ನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ವಾದಿ ಪ್ರತಿವಾದಿ 2 ಮತ್ತು 7 ರವರು ಸದರಿ ಕ್ರಯ ಪತ್ರಗಳಿಗೆ ಸಹಿ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಸಹಿಗಳನ್ನು ಖರೀದಿದಾರರ ಕೋರಿಕೆಯ ಮೇರೆಗೆ ಮಾಡಿಸಿರುತ್ತೇವೆ ಹೊರತು ಅವರಿಗೆ ಸದರಿ ಆಸ್ತಿಗಳಲ್ಲಿ ಹಕ್ಕಿದೆ ಎಂದು ಅರ್ಥವಲ್ಲ ಎಂದು ತಿಳಿಸಿರುತ್ತಾರೆ. ಈ ಹಂತದಲ್ಲಿ ಸದರಿ ಪ್ರತಿವಾದಿ 2 ಮತ್ತು 7 ಮತ್ತು ವಾದಿಯವರು ಸದರಿ ಕ್ರಯಪತ್ರಗಳಿಗೆ ತಮಗೆ ಆಸ್ತಿಗಳ ಮೇಲೆ ಹಕ್ಕು ಇದ್ದು ಸಹಿ ಮಾಡಿದ್ದಾರೆಯೇ ಅಥವಾ ಖರೀದಿದಾರರ ಒತ್ತಾಸೆಯ ಮೇರೆಗೆ ಸಹಿ ಮಾಡಿದ್ದಾರೆಂಬುದನ್ನು ಈ ಹಂತದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ. ಮುಂದುವರೆದು ಪ್ರತಿವಾದಿ 1 ರವರು, ಪ್ರತಿವಾದಿ 2 ರವರು ಮಂಡ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಹಿರಿಯ ನಾಗರಿಕ ಸಂರಕ್ಷಣೆ ಕಾಯ್ದೆಯ ಅಡಿಯಲ್ಲಿ ದಾಖಲು ಮಾಡಿರುವ ಅರ್ಜಿಯಲ್ಲಿ ಪ್ರತಿವಾದಿ 2 ರವರಿಗೆ ಮಾಶಾಸನ

ನೀಡುವ ಮತ್ತು ಅವರನ್ನು ನೋಡಿಕೊಳ್ಳುವ ಬಗ್ಗೆ ಹೇಳಿಕೆ ನೀಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿ 3, 4 ಮತ್ತು 6 ರವರು ಪ್ರತಿವಾದಿ 1 ರವರ ಹೆಸರಿಗೆ ಯಾವ ಸಂದರ್ಭದಲ್ಲಿ ಮತ್ತು ಯಾವ ಆಧಾರದ ಮೇರೆಗೆ ಬರೆದುಕೊಟ್ಟಿರುತ್ತಾರೆ ಎಂದು ಪರಿಶೀಲಿಸಬೇಕಾಗಿರುತ್ತದೆ.

**13.** ಪ್ರತಿವಾದಿಯವರು ದಾವಾ ಆಸ್ತಿಗಳು ಲಿಂಗಯ್ಯ ರವರ ಪಿತ್ರಾರ್ಜಿತ ಆಸ್ತಿಗಳು ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಎಲ್ಲಾ ದಾಖಲೆಗಳನ್ನು ಪರಿಶೀಲಿಸದಾಗ ದಾವಾ ಆಸ್ತಿಗಳೆಲ್ಲವೂ ಒಟ್ಟು ಕುಟುಂಬದ ಆಸ್ತಿಗಳು ಎಂಬುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಮೇಲ್ನೋಟಕ್ಕೆ ಸಮ್ಮತವಾದ ವಾದ ವಾದಿಯ ಪರವಾಗಿ ಇರುತ್ತದೆ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸಿದಿದ್ದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ವಾದಿ ಈ ಅರ್ಜಿಯ ದಾವಾ ಆಸಿಗಳನ್ನು ಬೇರೆಯವರಿಗೆ ಮಾರಾಟ ಮಾಡದಂತೆ ಆದೇಶಿಸಬೆಕೆಂದು ಕೋರಿರುತ್ತಾರೆ. ಇದರಿಂದ ಪ್ರತಿವಾದಿಗಳಿಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸದಿದ್ದರೆ ವಾದಿಗೆ ಪ್ರತಿವಾದಿಗಳಿಗಿಂತ ತುಂಬಲಾರದ ನಷ್ಟ ಉಂಟಾಗುತ್ತದೆ. ಆದ್ದರಿಂದ **ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಂಶ *1* ರಿಂದ *3* ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.**

**14. ಅಂಶ ನಂಃ 4ಃ-** ಮೇಲ್ಕಂಡ 1 ರಿಂದ 3 ನೇ ಅಂಶದಲ್ಲಿ ಚರ್ಚಿಸಲಾದಂತೆ ಈ ಕೆಳಕಂಡ ಃ

## ಆದೇಶ

**ವಾದಿಯು ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ *39* ನಿಯಮ *1* ಮತ್ತು *2* ಸಹವಾಚಕ ಕಲಂ *151* ನ್ನು ಪುರಸ್ಕರಿಸಲಾಗಿದೆ.**

**ಪ್ರತಿವಾದಿ *1, 8* ಮತ್ತು *9* ರವರು ದಾವಾ ಆಸ್ತಿಗಳನ್ನು ಈ ದಾವೆ ತೀರ್ಮಾನ ಆಗುವ ತನಕ ಯಾವುದೇ**

**ರೀತಿಯ ಮಾರಾಟ, ಪರಭಾರೆ, ಭೋಗ್ಯ ಹಾಗೂ ಸಾಲ ವಗೈರೆಗಳಂತಹ ಋಣ ಬಾಧ್ಯತೆಗಳನ್ನು ಮಾಡದಂತೆ ತಾತ್ಕಾಲಿಕ ನಿರ್ಭಂದಕಾಜ್ಞೆಯ ಮೂಲಕ ನಿರ್ಭಂದಿಸಲಾಗಿದೆ.**

**ಖರ್ಚುಗಳ ಬಗ್ಗೆ ಯಾವುದೇ ಆದೇಶ ಇಲ್ಲ.**

(ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಅವರು ಲಿಪ್ಯಂತರಿಸಿ, ಗಣಕೀಕೃತವಾದ ನಂತರ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ **ದಿನಾಂಕ 06 ನೇ ಫೆಬ್ರವರಿ 2024** ರಂದು ಘೋಷಿಸಲಾಯಿತು)

(ಕೋನಪ್ಪ ಎನ್ ವಿ)
2 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.